ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಎಲ್ಲರ ಬುರುಡೆಯಲ್ಲೂ ಒಂದೇ ಮೆದುಳು. ಆದರೂ ಬುದ್ಧಿ ಏಕೆ ಬೇರೆ ಬೇರೆ?*



ಎಲ್ಲರ ಮೆದುಳೂ ಹಾಲಿನಂತೆಯೇ ಇರುತ್ತದೆ; ಬೋಧನೆಗೆ, ವೇದನೆಗೆ ಅನುಗುಣವಾಗಿ ಕೆಲವು ಹಾಲಾಗಿಯೇ ಇರುತ್ತವೆ, ಕೆಲವು ಕೆಟ್ಟು ಮೊಸರ ಗಡಿಗೆ ಆಗುತ್ತವೆ!

ಅನು ಪ್ರಕಾಶ್, ಯಲಹಂಕ
*ತಮಿಳುನಾಡಿನಲ್ಲಿ ತಮಿಳರಿಗೆ ಆದ್ಯತೆ; ಆಂಧ್ರದಲ್ಲಿ ತೆಲುಗರಿಗೆ ಆದ್ಯತೆ; ಮಹಾರಾಷ್ಟ್ರದಲ್ಲಿ ಮರಾಠಿಗರಿಗೆ ಆದ್ಯತೆ. ಕರ್ನಾಟಕದಲ್ಲಿ?*
ಆ ಮೂರೂ ಜನಕ್ಕೆ ಆದ್ಯತೆ!

ಎನ್.ಆರ್. ದೇಸಾಯಿ, ರಾಯಚೂರು
*ತ್ಯಾಜ್ಯ ವಿಲೇವಾರಿ, ವ್ಯಾಜ್ಯ ವಿಲೇವಾರಿ ಇವೆರಡರಲ್ಲಿ ಯಾವುದು ಮೊದಲಾಗುತ್ತದೆ?*
ವಕೀಲರ ಮಧ್ಯಸ್ಥಿಕೆ ಇಲ್ಲದಿರುವುದರಿಂದ ತ್ಯಾಜ್ಯವೇ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಸ್ತ್ರೀಬುದ್ಧಿ ಪ್ರಳಯಾಂತಕ ಎನ್ನುವರಲ್ಲಾ, ಪುರುಷ ಬುದ್ಧಿ?*
ಸ್ತ್ರೀ ಅಂತಕ!

ಕೆ.ಎಂ. ಲಿಂಗರಾಜು, ನಂಜನಗೂಡು
*ಸೇವಕರಿಗೂ, ನಾಯಕರಿಗೂ ಇರುವ ವ್ಯತ್ಯಾಸವೇನು?*



ಸೇವಕರಿಗೆ ಶ್ರದ್ಧೆ ಹೆಚ್ಚು, ನಾಯಕರಿಗೆ ನಿದ್ದೆ ಹೆಚ್ಚು!

ಆರಿಫ್, ದಾವಣಗೆರೆ
*ಬಡವನ ಹಸಿವನ್ನು ನೀಗಿಸುವ ಒಂದು ಅಗುಳು ಅನ್ನಕ್ಕೆ ಎಷ್ಟು ಬೆಲೆ ಕಟ್ಟಬಹುದು?*
ಆ ಬಡವನ ಕಣ್ಣಿನಲ್ಲಿನ ಕೃತಜ್ಞತಾಭಾವವೇ ಆ ಅಗುಳಿನ ಬೆಲೆ!

ಎಚ್.ಜಿ. ಜಗದೀಶ್, ಮೈಸೂರು
*ಕೆಲವರ ಪ್ರಶ್ನೆಗಳಿಗೆ ಪ್ರತಿವಾರವೂ ಉತ್ತರಿಸುತ್ತೀರಲ್ಲಾ, ಅವರೆಲ್ಲ ನಿಮ್ಮ ಬಳಿ 'ಸೀಸನ್ ಟಿಕೆಟ್' ಮಾಡಿಸಿದ್ದಾರಾ?*
ಅವರು ಪ್ರಶ್ನೆಗಳನ್ನು ಕೇಳುವ ಸ್ಪೀಡ್ ಹಾಗಿದೆ. ಅವರ ಈವರೆಗಿನ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು 500 ವರ್ಷ ಬೇಕಾದೀತು!

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಕರೆನ್ಸಿ ನೋಟುಗಳ ಮೇಲೆ ಗೀಚಿ ಬರೆಯುವುದರ ಬಗ್ಗೆ ನಿಮ್ಮ ಅಮೂಲ್ಯ ಸಲಹೆ ಏನು?*
ನಿಮ್ಮ ಬರಹ ಆ ನೋಟುಗಳಿಗಿಂತಲೂ ಬೆಲೆ ಬಾಳುವುದಾದರೆ ಅಗತ್ಯವಾಗಿ ಬರೆಯಿರಿ!

ರಾಮಸ್ವಾಮಿ ಅಯ್ಯಂಗಾರ್, ಬೆಂಗಳೂರು
*ಈ ಅಂಕಣದಲ್ಲಿ ತಲೆ ಇರುವವರು ಹರಟುತ್ತಾರಾದ್ದರಿಂದ, ನೀವೂ ಹಾಗೇ ಇರುವುದರಿಂದ, ಈ ಅಂಕಣಕ್ಕೆ 'ತಲೆಹರಟೆ' ಎಂದೇಕೆ ಕರೆಯಬಾರದು?*
ತ– ತರ್ಕಬದ್ಧವಾದ, ಲೆ– ಲೆಕ್ಕಾಚಾರದ, ಹ– ಹದವಾದ, ರ– ರಮ್ಯವಾದ ಟೆ– ಟೆಪ್ಪರ(ಪುಟನೆಗೆತ) ಉತ್ತರಗಳಲ್ಲಿದ್ದರೆ ಅದೇ ಸರಿ!

ಜಯದೇವ ಹಲಕಿ, ಗೋಕಾಕ
*ಕತ್ತಲು ಬೆಳಕಿನ ಬಗ್ಗೆ ನೀವೇನಂತೀರಿ?*
ಮನಸ್ಸಿನಲ್ಲಿ ಬೆಳಕಿದ್ದರೆ ಕತ್ತಲು ಕತ್ತಲಲ್ಲ; ಮನಸ್ಸಿನಲ್ಲಿ ಕತ್ತಲಿದ್ದರೆ ಬೆಳಕು ಬೆಳಕಲ್ಲ!

ವಿ. ಹೇಮಂತಕುಮಾರ್, ಬೆಂಗಳೂರು
*ಹೆಂಡತಿಯನ್ನು ಧರ್ಮಪತ್ನಿ ಎನ್ನುವಂತೆ ಗಂಡನನ್ನು ಧರ್ಮಪತಿ ಎಂದೇಕೆ ಕರೆಯುವುದಿಲ್ಲ?*
ಧರ್ಮಕ್ಕೆ ಸಿಕ್ಕಿರುವುದಿಲ್ಲವಲ್ಲ! ಕನಿಷ್ಠ ವಾಚು, ಉಂಗುರ, ಸೂಟ್ ಆದರೂ ಪಡೆದಿರುತ್ತಾನೆ!

ಜೆ.ಸಿ. ರವಿಕುಮಾರ್, ಜಯಸುವರ್ಣಪುರ
*ದ್ವೇಷದ ಪ್ರಖರತೆ ಅಣ್ಣ ತಮ್ಮಂದಿರಲ್ಲೇ ಜಾಸ್ತಿ; ಏಕೆ?*
ವಿಷಯ ಹೆಚ್ಚು ತಿಳಿಯುವುದರಿಂದ ವಿಷ ಹೆಚ್ಚು ಏರುವುದಂತೆ!

ಹುಚ್ಚೀರ ಭಾಸ್ಕರ್, ಪಾಂಡವಪುರ
*ಸಿಹಿ ಇರುವ ಕಡೆ ಇರುವೆ ಮುತ್ತುತ್ತವೆಯಲ್ಲ, ಕಾರಣ ಕೊಡಿ?*
ಹೆಣ್ಣು ಇರುವೆ ಗಂಡು ಇರುವೆಯೊಡನೆ 'ಸಿಹಿಮುತ್ತು ಸಿಹಿಮುತ್ತು ಇನ್ನೊಂದು, ಕೆನ್ನೆಗೆ ಗಲ್ಲಕೆ ಮತ್ತೊಂದು' ಎಂದು ಡ್ಯುಯೆಟ್ ಹಾಡಲು!

## ಬಹುಮಾನಿತ ಪ್ರಶ್ನೆ

ಹಾಡ್ಯ ಬ. ಜಯಾನಂದ, ಮೈಸೂರು
*ಡೈವೋರ್ಸ್‌ಗೆ ಅವಕಾಶ ಇದ್ದಿದ್ದರೆ ದ್ರೌಪದಿ ಯಾರಿಗೆ ಸೋಡಾಚೀಟಿ ಕೊಡುತ್ತಿದ್ದಳು?*
ಒಂದು ತೊಗೊಂಡ್ರೆ ನಾಲ್ಕು ಫ್ರೀ ಎಂಬ ಆಫರ್‌ನಲ್ಲಿ ಪಡೆದದ್ದರಿಂದ ಅರ್ಜುನನಿಗೆ ಕೊಟ್ಟರೆ ಸಾಕಾಗುತ್ತಿತ್ತು!

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ
*ಹಾವಿನ ಹಲ್ಲಿನಲ್ಲಿ ವಿಷ; ಹೆಣ್ಣಿನ ಯಾವ ಅಂಗದಲ್ಲಿ ವಿಷ?*
ಹೆಣ್ಣಿನಲ್ಲಿ ಇರುವುದು ವಿಷವಲ್ಲ, ವಿಶೇಷ!

ಪದ್ಮ ಬಿ.ಎಂ. ಸಹಕಾರನಗರ
*ಎಲ್ಲ ನಗೆ ಹೊನಲುಗಳಲ್ಲಿ ಹೆಂಗಸರನ್ನು ದಡ್ಡರೆಂದು ಹೇಳುವುದೇಕೆ?*
ಅದು ಒಂದು ವಿಧದ ಮನೋಕಾಮಾಲೆ; ದಡ್ಡರಿಗೆ ಜಗದಲ್ಲಿ ಎಲ್ಲರೂ ದಡ್ಡರಂತೆ ಕಾಣುತ್ತಾರೆ!

ಆರ್. ಮಧುಸೂದನ್, ಹಾಸನ
*ಕೊಚ್ಚೆಯಲ್ಲಿ ಸುಖ ಅನುಭವಿಸುವ ಹಂದಿಗೂ, ಭ್ರಷ್ಟಾಚಾರದಲ್ಲಿ ಸುಖ ಅನುಭವಿಸುವ ರಾಜಕಾರಣಿಗೂ ವ್ಯತ್ಯಾಸವೇನು ಸರ್?*




ಹಂದಿ ಸ್ವಲ್ಪ ಹೊತ್ತಿಗೆ ಎದ್ದು ಹೋಗುತ್ತದೆ. ರಾಜಕಾರಣಿ ಸಾಯುವವರೆಗೂ ಅದೇ ಹೊಂಡದಲ್ಲೇ ಇರುತ್ತಾನೆ.

ಎಸ್.ಎನ್.ಮಹಾಬಲರಾವ್, ಎನ್‌ಆರ್‌ಪುರ
*ಇಲ್ಲೊಬ್ಬಳು ದಿಠಿಸಿನ ಮೂಲಕ ಕೆರಳಿಸಿದ್ದಾಳೆ...?*
ದೃಷ್ಟಿ ಬದಲಿಸಿ!

ಶ್ರೀಕಾಂತ ಜಿ.ಎಸ್. ಹೊನ್ನಾಳಿ
*ಬಿಜೆಪಿಗೆ ಘೋಷಿತ ಪ್ರಧಾನಿ ಅಭ್ಯರ್ಥಿ; ಕಾಂಗ್ರೆಸ್‌ಗೆ ಅಘೋಷಿತ ಪ್ರಧಾನಿ ಅಭ್ಯರ್ಥಿ; ತೃತೀಯ ರಂಗಕ್ಕೆ?*
ಅಘೋಷಿತ ಪಕ್ಷ; ಎಲ್ಲರೂ ಪ್ರಧಾನಿ ಅಭ್ಯರ್ಥಿಗಳೇ!

ರಾಮ್